

ಕೆಲ ಪ್ರಾಣಿ ಪಕ್ಷಿಗಳ ಬಗ್ಗೆ ಜನ ಕಟ್ಟಿಕೊಂಡಿರುವ ಊಹಾಪೋಹದ ಕಥೆಗಳು ಕೇಳಲು ಸೋಜಿಗ ಎನಿಸುತ್ತವೆ. ಇದರ ಜೊತೆ ಮೂಢನಂಬಿಕೆಗಳು ಸೇರಿಕೊಂಡು ಅನೇಕ ಜೀವಗಳ ಅನ್ಯಾಯದ ಹತ್ಯೆಗಳೂ ಜರುಗುತ್ತಿವೆ. ಗೂಬೆ, ಬಾವುಲಿ, ಎರಡು ತಲೆಯ ಹಾವು, ಉಡ, ಓತಿಕ್ಯಾತ ಮತ್ತು ಗೋಸುಂಬೆಗಳೂ ಕೂಡ ಇದೇ ರೀತಿ ಅನೇಕ ಆರೋಪಗಳನ್ನು ಹೊತ್ತು ಪ್ರಾಣ ಚೆಲ್ಲುವ ಜೀವರಾಶಿಗಳು.

ಪ್ರಾಣಿ ಪಕ್ಷಿಗಳ ವಿಷಯದಲ್ಲಿ ಸರಿಯಾದ ತಿಳಿವಳಿಕೆಯಿಲ್ಲದೆ ಹುಟ್ಟುವ, ಇಂಬಿಲ್ಲದ ನಂಬಿಕೆಗಳು ಇವುಗಳ ಪ್ರಾಣಕ್ಕೆ ಸಂಚಕಾರ ತಂದಿಟ್ಟಿವೆ. ಕೆಲವರು ಇವನ್ನು ಹೆಗಲಮೇಲೆ ಹೊತ್ತು ಭಿಕ್ಷಾಟನೆ ಕೂಡ ಮಾಡುತ್ತಿದ್ದರಂತೆ. ಈಗಲೂ ಕೆಲವರು ಬೈಯುವಾಗ 'ನೋಡೋಕೆ ಒಳ್ಳೆ ಕಾಡುಪಾಪ ಇದ್ದಂಗೆ ಇದೀಯಲ್ಲೋ' ಎಂದು ಹಂಗಿಸುವುದೂ ಉಂಟು.

ಮತ್ತೆ ಎಷ್ಟು ಹುಡುಕಿದರೂ ಕಾಡುಪಾಪ ಸಿಗದೇ ಹೋದಾಗ ನಾನು ಅದರ ವಿಷಯ ಮರೆತು ಸುಮ್ಮನಾಗಿಬಿಟ್ಟೆ. ಒಂದು ದಿನ ತುಮಕೂರಿನ ಡಾ. ಉಮಾಶಂಕರ್ ಫೋನು ಮಾಡಿದರು. 'ಸರ್, ನೀವು ಹುಡುಕುತ್ತಿರುವ ಕಾಡುಪಾಪ ತುಮಕೂರಿನ ಹೊರ ವಲಯದಲ್ಲಿ ಸಿಕ್ಕಿದೆ. ಇಟ್ಟಿಗೆ ಬಟ್ಟಿ ಸುಡುವ ಹುಡುಗರು ಮರದ ಮೇಲಿದ್ದ ಅದನ್ನು ಕುತೂಹಲಕ್ಕೆ ಹಿಡಿದು ಹಾಕಿದ್ದಾರೆ. ಅದು ಒಬ್ಬನಿಗೆ ಕಚ್ಚಿ ಗಾಯ ಕೂಡ ಮಾಡಿದೆ. ನನ್ನ ಹತ್ರ